| |
|---|
| **Deposition Sheets (RP.No.57) Form No.4** |

**IN THE COURT OF IADDL. CIVIL JUDGE & J.M.F.C., KARKALA.**

**Criminal Case No. 1062/2014**

ಪಿಡ್ಸ್ಯೂಃ 4 ಸಿಡ್ಲ್ಯೂಃ 6

ಸಾಕ್ಷಿದಾರನ ಹೆಸರು : ವಿದ್ಯಾನಂದ ಆಚಾರ್ಯ

ತಂದೆಯ ಹೆಸರು : ತಿಮ್ಮಪ್ಪ ಆಚಾರಿ

ಪ್ರಾಯ : 45 ವರ್ಷ

ಉದ್ಯೋಗ : ಚಿನ್ನದ ಕೆಲಸ

ವಾಸ : ಮುದ್ರಾಡಿ

ದಿನಾಂಕ 19.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ದಿಃ21.09.2011 ರಂದು ಪೊಲೀಸರು ನನ್ನನ್ನು ಕಾಂತವರ ಬಾರಾಡಿಗೆ ಕರೆದಿರುತ್ತಾರೆ. ಒಂದು ಚಿನ್ನದ ಸರವನ್ನು ತೂಕ ಮಾಡಲು ಕರೆದಿರುತ್ತಾರೆ. ಹೆಬ್ರಿ ಪೊಲೀಸ್ ಠಾಣೆಯಲ್ಲಿ ಸದ್ರಿ ಚಿನ್ನದ ಸರವನ್ನು ಪರಿಶೀಲನೆ ಮಾಡಿ ಅದರ ತೂಕವನ್ನು ಕೊಟ್ಟಿರುತ್ತೇನೆ . ಸದ್ರಿ ಚಿನ್ನದ ಸರವನ್ನು ಮಹಜರು ಮೂಲಕ ಸ್ವಾಧೀನಪಡಿಸಿಕೊಂಡಿರುತ್ತಾರೆ. ಮಹಜರು ಸಮಯದಲ್ಲಿ ಚಾಸಾ-9 ಮತ್ತು 10 ಇದ್ದರು. ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಈಗ ನಾನು ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆಯು ಪಂಚಾನಮೆಯಾಗಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

2. ದಿನಾಂಕ 21.09.2011 ರಂದು 2 ನೇ ಆರೋಪಿಯು ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ಹೇಳಿದಂತೆ ಉಡುಪಿ 80 ಬಡಗಬೆಟ್ಟು ಕಲ್ಲಡ್ಕ ಎಂಬ ಮನೆಯಲ್ಲಿ ಈ ಪ್ರಕರಣಕ್ಕೆ ಸಂಬಂದಪಟ್ಟ ಕರಿಮಣಿ ಸರವನ್ನು ಹಾಜರುಪಡಿಸಿದ್ದನ್ನು ಸ್ವಾಧೀನಪಡಿಸಿಕೊಂಡ ಬಳಿಕ ಆರೋಪಿ ಕಾರ್ಕಳ ತಾಲುಾಕು ಕಾಂತವಾರ ಗ್ರಾಮದ ಬಾರಾಡಿ ಎಂಬಲ್ಲಿ ವೃದ್ದೆಯ ಕುತ್ತಿಗೆಯಿಂದ 1 ನೇ ಆರೋಪಿ ಎಳೆದ ತೆಗೆದ ಚಿನ್ನದ ಸರವನ್ನು ಬೈಲಕೆರೆಯ ಕಿರಣ್ ಎಂಬುವವರಿಗೆ ನೀಡಿದ್ದು ಷದ್ರಿ ಮನೆಯನ್ನು ತೋರಿಸಿ ಚಿನ್ನದ ಸರವನ್ನು ತೆಗೆದು ಹಾಜರುಪಡಿಸುವುದಾಗಿ ತಿಳಿಸಿದಂತೆ ಚಾಸಾ-4 ಕಿರಣ್ ಎಂಬುವವರ ಮನೆಗೆ ಹಾಜರಾಗಿರುತ್ತೇವೆ. ಚಾಸಾ-4 ರವರು ಹಾಜರುಪಡಿಸಿದ ಚಿನ್ನದ ಸರವನ್ನು ನಾನು ಪರೀಶಿಲನೆ ಮಾಡಿರುತ್ತೇನೆ. ನಂತರ ನನ್ನ ಸಮಕ್ಷಮ ಪೊಲೀಸರು ಮಹಜರು ಮೂಲಕ ಸ್ವಾಧೀನಪಡಿಸಿಕೊಂಡಿರುತ್ತಾರೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದಃ

3. ಈಗ ನಾನುನೋಡಿದ ದಾಖಲೆಯು ಮೂಲ ಪ್ರಕರಣ ಸಂ. 135/2012 ರ ನನ್ನ ಸಾಕ್ಷ್ಯ ವಿಚಾರಣೆಯಾಗಿರುತ್ತದೆ. ಸಾಕ್ಷಿ ಒಪ್ಪಿದ ಮೇರೆಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಆ ದಿನ ನನ್ನ ಜೊತೆ ಬೇರೆ ಯಾರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ-2 ಮಹಜರಿನಲ್ಲಿ ಏನೆಲ್ಲಾ ಬರವಣಿಗೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ಪೊಲೀಸರು ಸಹಿ ಮಾಡಲು ತಿಳಿಸಿರುತ್ತಾರೆ. ಅದರಂತೆ ನಾನು ಸಹಿ ಮಾಡಿರುತ್ತೇನೆ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ